# ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಅರಣ್ಯ ಮಹಾವಿದ್ಯಾಲಯ, ಶಿರಸಿ–581 401 ಉ.ಕ. ಜಿಲ್ಲೆ ಕರ್ನಾಟಕ

ಸಂ. ಡೀನ್ (ಅ)ಅ.ಮ.ವಿ.ಶಿರಸಿ/ತಾ.ನೇ/521/2023–24 ದಿನಾಂಕ: 05–09–2023

## ಅಧಿಸೂಚನೆ

ವಿಷಯ: ಅರಣ್ಯ ಮಹಾವಿದ್ಯಾಲಯ, ಶಿರಸಿಯಲ್ಲಿ ಗ್ರಂಥಾಲಯ ಸಹಾಯಕರ ತಾತ್ಕಾಲಿಕ ನೇಮಕಾತಿ ಕುರಿತು.

ಉಲ್ಲೇಖ: ಕೃ.ವಿ.ವಿ ಪರವಾನಿಗೆ ಪತ್ರ ಸಂ. R/R2U/R401/LA/1813-B/2023-24,Dtd. 02-09-2023.

******

ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಅರಣ್ಯ ಮಹಾವಿದ್ಯಾಲಯ, ಶಿರಸಿಯ ಆವರಣದ ಗ್ರಂಥಾಲಯಕ್ಕೆ ಪೂರಕ ಸೌಲಭ್ಯವನ್ನು ಒದಗಿಸುವ ಸಲುವಾಗಿ. ಲೆಕ್ಕ ಶೀರ್ಷಿಕೆ 2035/310 ಅಡಿಯಲ್ಲಿ "ಗ್ರಂಥಾಲಯ ಸಹಾಯಕ" ಹುದ್ದೆಗೆ ಈ ಕೆಳಗೆ ಕಾಣಿಸಿದ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಯನ್ನು ಸದರಿ ಹುದ್ದೆಗೆ **179 ದಿನಗಳ** ಅವಧಿಗೆ ಮೀರದಂತೆ ತಾತ್ಕಾಲಿಕವಾಗಿ ನೇಮಕಾತಿಯನ್ನು ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿಪಡಿಸಲಾದ ವಿದ್ಯಾರ್ಹತೆ, ವೇತನ ಇತ್ಯಾದಿಗಳ ವಿವರಗಳು ಈ ಕೆಳಗಿನಂತೆ ಇರುತ್ತವೆ.

| Name of the Post | No. of Post | Educational Qualification | Consolidated Salary p.m |
|---|---|---|---|
| Library Assistant | 01 | B Lib. I.Sc / M Lib. I.Sc | Rs. 14,000/- pm |

ನೇಮಕಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಇದರೊಂದಿಗಿನ ಅರ್ಜಿ ನಮೂನೆಯ ಎರಡು ಪ್ರತಿಗಳೊಂದಿಗೆ ದಿನಾಂಕ: **21–09–2023**ರಂದು **ಮುಂಜಾನೆ 11.00** ಗಂಟೆಗೆ ಡೀನ್ (ಅರಣ್ಯ). ಅರಣ್ಯ ಮಹಾವಿದ್ಯಾಲಯ, ಶಿರಸಿರವರ ಕಾರ್ಯಾಲಯದಲ್ಲಿ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ. ಸಂದರ್ಶನಕ್ಕೆ ಬರುವಾಗ ತಮ್ಮ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲ ಮೂಲ ದಾಖಲೆಗಳನ್ನು ಹಾಗೂ ಅವುಗಳ ಎರಡು ಧೃಡಿಕೃತ ಪ್ರತಿಗಳನ್ನು ಸಂದರ್ಶನದ ಸಮಯದಲ್ಲಿ ತರಲು ತಿಳಿಸಲಾಗಿದೆ. ಯಾವುದೇ ಸಂದರ್ಭದಲ್ಲಿ ಅರ್ಜಿಯನ್ನು ಮುಂಗಡವಾಗಿ ಕಳುಹಿಸಬಾರದು.

ಸಂದರ್ಶಕ್ಕೆ ಬರುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹಾಜರಾಗಬೇಕು. ಸದರಿ ನೇಮಕಾತಿಯು ತಾತ್ಕಾಲಿಕವಾಗಿರುವುದರಿಂದ ಯಾವುದೇ ಸಮಯದಲ್ಲಿ ಯಾವುದೇ ಕಾರಣ ತಿಳಿಸದೇ ತೆಗೆದುಹಾಕಲಾಗುವುದು ಹಾಗೂ ಕೃಷಿ ವಿಶ್ವವಿದ್ಯಾಲಯದಲ್ಲಿ ನೇರ ನೇಮಕಾತಿಗಾಗಿ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.

(ಆರ್ ವಾಸುದೇವ)
ಡೀನ್ (ಅರಣ್ಯ)
ಅರಣ್ಯ ಮಹಾವಿದ್ಯಾಲಯ
ಶಿರಸಿ - 581 401

ಪ್ರತಿಯನ್ನು

1. ಶಿಕ್ಷಣ ನಿರ್ದೇಶಕರು/ ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಆಡಳಿತಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಮಾಹಿತಿಗಾಗಿ
2. ಸಂಶೋಧನಾ ನಿರ್ದೇಶಕರು/ ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ಧಾರವಾಡ.
3. ಡೀನ್(ಸ್ನಾತಕೋತ್ತರ)/ ಡೀನ್(ಕೃಷಿ), ಕೃಷಿ ಮಹಾವಿದ್ಯಾಲಯ, ಧಾರವಾಡ/ ವಿಜಯಪುರ/ ಹನುಮನಮಟ್ಟಿ.
4. ಕುಲಸಚಿವರು, ಕವಿವಿ, ಪಾವಟೆನಗರ, ಧಾರವಾಡ ಇವರಿಗೆ ಮಾಹಿತಿಗಾಗಿ.
5. **ಗ್ರಂಥಪಾಲಕರು, ಕೃ.ವಿ.ವಿ.ಧಾರವಾಡ**–ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಹಾಗೂ ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲು ಕೋರಲಾಗಿದೆ.
6. **ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಾರವಾರ**–ಸದರಿ ವಿಷಯವನ್ನು ಎಲ್ಲರ ಸೂಕ್ತ ಮಾಹಿತಿಗಾಗಿ ಪ್ರಚಾರ ಮಾಡಲು ಕೋರಲಾಗಿದೆ.

ಪ್ರತಿಯನ್ನು ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕೃವಿವಿ ಧಾರವಾಡ ಇವರಿಗೆ ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತರಲು ಕೊರಲಾಗಿದೆ.